ರಾಜ್ಯದಲ್ಲಿ ಮತ್ಸ್ಯಾಲಯ ಕಟ್ಟಡ.

1255(1466) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಶ್ರೀಕ್ಷೇತ್ರ ಸೊಗಲದಲ್ಲಿ ಮತ್ಸ್ಯಾಲಯದ ಕಟ್ಟಡವನ್ನು ಕಟ್ಟಲು ಭೂ ಸೇನಾ ನಿಗಮದವರಿಗೆ ಎಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಯಿತು. ಹಾಗೂ ಎಷ್ಟು ಮೊತ್ತಕ್ಕೆ ನೀಡಲಾಯಿತು. ಮತ್ತು ಎಷ್ಟು ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಮಾಡಿ ಮುಗಿಸಬೇಕೆಂದು ನಿರ್ಧರಿಸಲಾಗಿತ್ತು.

ಆ) ಮತ್ಸ್ಯಾಲಯದಲ್ಲಿ ಕಟ್ಟಡ ಇನ್ನೂ ಪೂರ್ಣಗೊಳ್ಳದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಎಷ್ಟು ಹಣ ಬೇಕಾಗುವುದು. ಹಣ ಒದಗಿಸಲು ಯಾವ ಯೋಜನೆ ಹಮ್ಮಿಕೊಳ್ಳಲಾಗಿದೆ?

ಇ) ಮತ್ಸ್ಯಾಲಯ ಪೂರ್ಣಗೊಳ್ಳದೆ ಇರುವುದರಿಂದ ವಿನಾಕಾರಣ ಕೆ.ಇ.ಬಿ ಬಿಲ್ಲನ್ನು ಕೊಡಲಾಗುತ್ತಿರುವ ಸಂಗತಿ ನಿಜವೆ? ಕೆಇಬಿ ಬಿಲ್ಲು ಎಷ್ಟು ಬಾಕಿ ಇರುವುದು? ಆ ಹಣವನ್ನು ಎಷ್ಟು ದಿನಗೊಳಗಾಗಿ ತುಂಬಲಾಗುವುದು?

ಈ) ಕಟ್ಟಡದ ಕೆಲಸವನ್ನು ಪೂರ್ಣಗೊಳಿಸುವುದಾಗಿ ತಿಳಿಸಿದ್ದರೂ ಪೂರ್ಣಗೊಳಿಸದೇ ಇರುವುದರಿಂದ ತಪ್ಪಿತಸ್ಥರ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

ಅ) ಮತ್ಸ್ಯಾಲಯವನ್ನು ಕಟ್ಟಲು ಜಿಲ್ಲಾ ಪಂಚಾಯತ್ ಬೆಳಗಾಂರವರ ಆದೇಶ ಸಂ:ಜಡ್‌ಪಿ ಡಬ್ಲ್ಯೂಯು:ಜೆಡಿಪಿ : ಸಿಆರ್ : 51 : 98-99 ದಿನಾಂಕ : 27-3-89 ರಂತೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು. ಹಾಗೂ ರೂ.7,47,600.00 ಗಳಿಗೆ ಮಂಜೂರಾತಿ ನೀಡಲಾಗಿತ್ತು. 4 ವರ್ಷಗಳ ಅವಧಿಯಲ್ಲಿ ಅಗತ್ಯ ಅನುದಾನ ಲಭ್ಯವಾಗುವ ನಿರೀಕ್ಷೆಗೆ ಒಳಪಟ್ಟು ಪೂರ್ಣಗೊಳಿಸಲು ನಿರ್ಧರಿಸಲಾಗಿತ್ತು.

ಆ) ಕಟ್ಟಡದ ಹೆಚ್ಚಿನ ಕಾಮಗಾರಿಗಳು ಪೂರ್ಣಗೊಂಡಿದ್ದು ವಿದ್ಯುತ್ ವ್ಯವಸ್ಥೆ ಸಣ್ಣಪುಟ್ಟ ಕೆಲಸಗಳು ಮಾತ್ರ ಬಾಕಿ ಇರುತ್ತವೆ. ಪರಿಶುದ್ಧ, ಮಾಲಿನ್ಯ ರಹಿತ ನಿರಂತರ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಜೊತೆಗೆ ಒಳಾಂಗಣ ಅಲಂಕಾರ ಮಾಡು ತೊಟ್ಟಿಗಳು ಅಗತ್ಯವಾಗಿವೆ. ಇದಕ್ಕೆ ಸುಮಾರು 10.00 ಲಕ್ಷ ಬೇಕಾಗುವುದು. ಈ ಅನುದಾನವನ್ನು ಜಿಲ್ಲಾ ಪಂಚಾಯತ್ ಒದಗಿಸಬೇಕಾಗಿದೆ.

ಇ) ಈ ಸಂಗತಿ ನಿಜವಲ್ಲ, ಕೇಳಿದವರು ರೂ.14370-00 ಗಳನ್ನು ಕಟ್ಟಲು ಬಿಲ್ಲು ಕಳುಹಿಸಿರುತ್ತಾರೆ. ಸದರಿ ಮೊತ್ತವನ್ನು ಕೂಡಲೇ ಪಾವತಿಸಲು ಕರ್ನಾಟಕ ಭೂಸೇನಾ ನಿಗಮ ನಿಯಮಿತ, ಬೆಳಗಾಂರವರಿಗೆ ತಿಳಿಸಲಾಗಿದೆ.

ಈ) ಜಿಲ್ಲಾ ಪಂಚಾಯತ್ ಬೆಳಗಾವಿ ಮತಿಯಿಂದ ಅಗತ್ಯವಾದ ಅನುಮಾನವನ್ನು ಒದಗಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತದೆ. ಕಾಮಗಾರಿಯಲ್ಲಿ ಕಂದುಕೊರತೆಗಳಿದ್ದಲ್ಲಿ ತಪಿತಸ್ಥ ಅಧಿಕಾರಿಗಳ ವಿರುದ್ಧ ಜಿಲ್ಲಾ ಪಂಚಾಯತ್ ಬೆಳಗಾವಿರವರಿಂದ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಸುಳ್ಳು ಜಾತಿ ಪ್ರಮಾಣ ಪತ್ರವನ್ನುನೀಡಿ ಹುದ್ದೆ ಪಡೆಯುವುದು.

1257(1234) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ 31-12-2001 ರವರೆಗೆ ಸುಳ್ಳುಜಾತಿ ಪ್ರಮಾಣ ಪತ್ರವನ್ನು ನೀಡಿ ಸರ್ಕಾರಿ ಹುದ್ದೆ ವೈದ್ಯಕೀಯ ಇಂಜಿನಿಯರಿಂಗ್ ಇನ್ನಿತರೇ ವ್ಯಾಸಂಗ ಹಾಗೂ ಇನ್ನಿತರೇ ಸರ್ಕಾರಿ ಸೌಲಭ್ಯಗಳನ್ನು ಪಡೆಯುವವರ ಸಂಖ್ಯೆ ಎಷ್ಟು? ಅವುಗಳಲ್ಲಿ ಎಷ್ಟು ಜನರ ಮೇಲೆ ತನಿಖೆಯನ್ನು ಕ್ರಮ ಜರುಗಿಸಲಾಗಿದೆ?

ಆ. ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಎಷ್ಟು ಜನರ ಮೇಲೆ ನ್ಯಾಯಾಲಯದಲ್ಲಿ ಮೊಕ್ಕದ್ದಮೆ ದಾಖಲಿಸಲಾಗಿದೆ. ಇದರಲ್ಲಿ ಇತ್ಯರ್ಥ ಗೊಂಡಿರುವ ಮೊಕ್ಕದ್ದಮ್ಮೆಗಳು ಎಷ್ಟು ಉಳಿದವು ಯಾವ ಹಂತದಲ್ಲಿರುತ್ತವೆ;

ಇ) ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ಸೌಲಭ್ಯಗಳನ್ನು ಪಡೆದಿದ್ದರು ಯಾವುದೇ ಕ್ರಮವನ್ನು ಇದುವರೆವಿಗೂ ಕೈಗೊಳ್ಳದೇ ಇರುವವರ ಸಂಖ್ಯೆ ಎಷ್ಟು;

ಈ. ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

518 ಪ್ರಕರಣಗಳಲ್ಲಿ ದಿನಾಂಕ: 31-12-2001 ರವರೆಗೆ ಕ್ರಮ ಜರುಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಅಂತಹ ಪ್ರಕರಣಗಳು ಯಾವುದು ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.